ಪೋಲಿಸ್ ಉಪ ವಿಭಾಗ ಪ್ರಾರಂಭಿಸವುದು

43(665) ಶ್ರೀ ಶಿವಶಂಕರ್ ಎಚ್,ಎಸ್.(ಹರಿಹರ)

ಅ) ದಾವಣಗೆರೆ ಜಿಲ್ಲೆಯ ಪೊಲೀಸ್ ವಸತಿ ಗೃಹಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಹರಿಹರ–ಹೊನ್ನಾಳಿ ಒಳಗೊಂಡಂತೆ ಹರಿಹರವನ್ನು ಕೇಂದ್ರವನ್ನಾಗಿಸಿ ಪೊಲೀಸ್ ಉಪ ವಿಭಾಗ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಕೆ.ಜೆ.ಜಾರ್ಜ್(ಗೃಹ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) 2012–13ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಯಲ್ಲಿನ ವಿವಿಧ ಸ್ಥಳಗಳಲ್ಲಿರುವ ಪೊಲೀಸ್ ವಸತಿಗೃಹಗಳ ದುರಸ್ತಿಗಾಗಿ ಒಟ್ಟು ರೂ.2,63,45,000/–ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಒಟ್ಟು 195 ವಸತಿಗೃಹಗಳನ್ನು ದುರಸ್ತಿ ಪಡಿಸಲಾಗಿದೆ. ವಿವರಗಳು ಕೆಳಕಂಡಂತಿದೆ

ಘಟಕದ ಹೆಸರು	ವಸತಿ ಗೃಹಗಳ ಸಂಖ್ಯೆ	ಅಂದಾಜು ಮೊತ್ತ (₹ ಲಕ್ಷಗಳಲ್ಲಿ)
ದಾವಣಗೆರೆ ನಗರ	60	85.22
ಹರಿಹರ	22	37.23
ಹರಪನಹಳ್ಳಿ	10	9.40
ಅರಸೀಕೆರೆ	08	11.80
ಜಗಳೂರು	24	15.90

ಬಿಳಿಚೋಡು	20	12.40
ಹಲುವಾಗಿಲು	09	9.00
ಚನ್ನಗಿರಿ	22	30.80
ಸಂತೇಬೆನ್ನೂರು	19	30.70
ಬಡಾವಣೆ ಠಾಣೆ ಕಟ್ಟಡ	1	21.00
ಒಟ್ಟು	**195**	**263.45**

2013 – 14 ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಯಲ್ಲಿನ ವಿವಿಧ ಸ್ಥಳಗಳಲ್ಲಿರುವ ಪೊಲೀಸ್ ವಸತಿಗೃಹಗಳ ದುರಸ್ತಿಗಾಗಿ ಒಟ್ಟು ₹. 2,17,33, 484.00/–ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಇದುವರೆವಿಗೂ ಒಟ್ಟು 82 ವಸತಿಗೃಹಗಳನ್ನು ದುರಸ್ತಿ ಪಡಿಸಲಾಗಿದೆ. ವಿವರಗಳು ಕೆಳಕಂಡಂತಿದೆ

ಘಟಕದ ಹೆಸರು	ವಸತಿ ಗೃಹಗಳ ಸಂಖ್ಯೆ	ಅಂದಾಜು ಮೊತ್ತ (₹ ಲಕ್ಷಗಳಲ್ಲಿ)
ಮಾಯಕೊಂಡ	16	26.00
ನ್ಯಾಮತಿ	14	25.63
ಎಸ್.ಪಿ.ರವರ ನಿವಾಸ	1	2.53
ದಾವಣಗೆರೆ ನಗರ	51	93.57
ಒಟ್ಟು	82	147.73
ಬಾಕಿ ಉಳಿದಿರುವ ಅನುದಾನ		69.60

ಬಾಕಿ ಉಳಿದಿರುವ ಅನುದಾನದಲ್ಲಿ ದಾವಣಗೆರೆ ಜಿಲ್ಲೆಯ ಇನ್ನುಳಿದ ಇತರೆ ವಸತಿಗೃಹಗಳ ದುರಸ್ತಿಗಾಗಿ ಅಂದಾಜು ಪಟ್ಟಿಯನ್ನು ತಯಾರಿಸುವಂತೆ ಲೋಕೋಪಯೋಗಿ ಇಲಾಖೆಯರವರನ್ನು ಕೋರಲಾಗಿದ್ದು, ಅಂದಾಜು ಪಟ್ಟಿ ಸ್ವೀಕೃತವಾದ ನಂತರ ಬಾಕಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಇ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಶ್ರೀ ಎಂ.ಬಿ.ಪ್ರಕಾಶ್ ರವರ ತಾಲ್ಲೂಕು ಪುನರ್ ರಚನಾ ಸಮಿತಿಯು 2009ರಲ್ಲಿ ಸಲ್ಲಿಸಿರುವ ವರದಿಯಂತೆ ಹರಿಹರ ಹೊನ್ನಾಳಿ ಒಳಗೊಂಡಂತೆ ಹರಿಹರವನ್ನು ಕೇಂದ್ರವನ್ನಾಗಿಸಿ ಪೊಲೀಸ್ ಉಪ ವಿಭಾಗ ಪ್ರಾರಂಭಿಸುವ ಪ್ರಸ್ತಾವನೆಗೆ ಶಿಫಾರಸ್ಸು ಮಾಡಿರುವುದಿಲ್ಲ. ಆದ್ದರಿಂದ, ಹರಿಹರ–ಹೊನ್ನಾಳಿ ಒಳಗೊಂಡಂತೆ ಹರಿಹರವನ್ನು ಕೇಂದ್ರವನ್ನಾಗಿಸಿ ಪೊಲೀಸ್ ಉಪ ವಿಭಾಗ ಪ್ರಾರಂಭಿಸುವ ಅವಶ್ಯಕತೆ ಇರುವುದಿಲ್ಲ.

ಶ್ರೀ ಶಿವಶಂಕರ್ ಎಚ್.ಎಸ್: ದಾವಣಗೆರೆ ಜಿಲ್ಲೆಯಲ್ಲಿರತಕ್ಕಂತಹ ಪೋಲಿಸ್ ವಸತಿ ಗೃಹಗಳ ದುರಸ್ತಿಗೆ ಎಷ್ಟು ಹಣವನ್ನು ಮೀಸಲಿಟ್ಟಿದ್ದೀರಿ ಎಂದು ಕೇಳಿದಂತಹ ಪ್ರಶ್ನೆಗೆ, ಉತ್ತರದಲ್ಲಿ 2012–13ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಯಲ್ಲಿನ ವಿವಿಧ ಸ್ಥಳಗಳಲ್ಲಿರುವ 195 ಪೋಲೀಸ್ ವಸತಿ ಗೃಹಗಳ ದುರಸ್ತಿಗಾಗಿ ಒಟ್ಟು ರೂ.2,63,45,000/–ಖರ್ಚು ಮಾಡಿದ್ದೇವೆಂದು ತಿಳಿಸಿದ್ದಾರೆ. ನಾನು ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ, ದಾವಣಗೆರೆಯು ಸಾವಿರಾರು ಸಂಖ್ಯೆಯ ಪೊಲೀಸರು ಇರುವಂತಹ ಕೇಂದ್ರವಾಗಿದೆ. ಅಲ್ಲಿನ ಮಧ್ಯಭಾಗವು ಸುಮಾರು 25–30 ಎಕರೆಯಷ್ಟು ವಿಸ್ತೀರ್ಣ ಹೊಂದಿರುವ ಜಾಗವಾಗಿದೆ. ಅಲ್ಲಿರುವ ಮನೆಗಳು ಸುಮಾರು 60 ವರ್ಷಗಳ ಹಿಂದೆ ನಿರ್ಮಾಣವಾಗಿರುವಂತಹುದಾಗಿದೆ. ಅಲ್ಲಿರುವ ಎಲ್ಲಾ ಮನೆಗಳು dilapidated condition ನಲ್ಲಿದೆ.

ಅಧ್ಯಕ್ಷರು: ಪ್ರಶ್ನೆಗೆ ಬನ್ನಿ,

ಶ್ರೀ ಎಚ್.ಎಸ್.ಶಿವಶಂಕರ್: ಪ್ರಶ್ನೆಗೆ ಬರುತ್ತಿದ್ದೇನೆ. ಪ್ರತಿವರ್ಷ ನಮ್ಮ ಜಿಲ್ಲೆಗೆ 2 ಕೋಟಿ ರೂ.ಗಳನ್ನು ಖರ್ಚು ಮಾಡುವ ಬದಲು ಒಂದೇ ಸಮಯಕ್ಕೆ ಸರಿಯಾಗಿ ಹೊಸ ಮನೆಗಳನ್ನು ಕಟ್ಟಿಸಿ, ಪೊಲೀಸರಿಗೆ ಏಕೆ ಕೊಡಬಾರದು? ಈ ಸಂಬಂಧವಾಗಿ ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರು: ಆ ಪ್ರಶ್ನೆ ಇಲ್ಲಿ ಬರುವುದೇ ಇಲ್ಲ. ರಿಪೇರಿಗೆ ಮಾತ್ರ ಸಂಬಂಧಪಡುವ ಪ್ರಶ್ನೆಯನ್ನು ಕೇಳಿ.

ಶ್ರೀ ಎಚ್.ಎಸ್.ಶಿವಶಂಕರ್: ಹರಿಹರ–ಹೊನ್ನಾಳಿಯನ್ನು ಒಳಗೊಂಡಂತೆ ಪೊಲೀಸ್ ಉಪ–ವಿಭಾಗವನ್ನು ಹರಿಹರದಲ್ಲಿ ಏಕೆ ಪ್ರಾರಂಭಿಸಬಾರದೆಂದು ಕೇಳಿದ್ದೇನೆ, ದಿವಂಗತ ಎಂ.ಪಿ.ಪ್ರಕಾಶ್‌ರವರ ತಾಲ್ಲೂಕು ಪುನರ್ ರಚನಾ ಸಮಿತಿ 2009 ರಲ್ಲಿ ವರದಿ ನೀಡಿರುವಂತೆ, ಅಲ್ಲಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಆದರೆ ಅವತ್ತಿನ ಪರಿಸ್ಥಿತಿಗೆ ತಕ್ಕಂತೆ ವರದಿಯನ್ನು ಕೊಟ್ಟಿರಬಹುದು.

ಅಧ್ಯಕ್ಷರು: ವಸತಿ ಗೃಹಗಳ ಬಗ್ಗೆ ಪ್ರಶ್ನೆಯನ್ನು ತಾವು ಕೇಳಿದ್ದೀರಿ.

ಶ್ರೀ ಎಚ್.ಎಸ್.ಶಿವಶಂಕರ್: ಆ ಪ್ರಶ್ನೆಯಲ್ಲಿ ಉಪ ಪ್ರಶ್ನೆಯಾಗಿ ಕೇಳಿದ್ದೇನೆ.

ಅಧ್ಯಕ್ಷರು: ಅದು ಆಗುವುದಿಲ್ಲ. ಅವರು ಉತ್ತರವನ್ನು ತಂದಿರಬೇಕಲ್ಲವೇ?.

ಶ್ರೀ ಎಚ್.ಎಸ್.ಶಿವಶಂಕರ್ : ನಾನು ಉಪ ಪ್ರಶ್ನೆಯನ್ನು ಕೇಳಿದ್ದು, 2009 ರಲ್ಲಿ ಅವರು ಆ ರೀತಿ ವರದಿ ಕೊಟ್ಟಿರಬಹುದು. ಆದರೆ ಹರಪನಹಳ್ಳಿ–ಜಗಳೂರು ಎರಡು ತಾಲ್ಲೂಕುಗಳನ್ನು ಸೇರಿಸಿ ಉಪವಿಭಾಗ ಮಾಡುವುದಕ್ಕೆ ಸಾಧ್ಯತೆ ಇರುವಾಗ, ದಾವಣಗರೆ ಕೇಂದ್ರವಾಗಿರುವಂತಹ ಉಪವಿಭಾಗವು ನಾಲ್ಕು ತಾಲ್ಲೂಕುಗಳನ್ನು ಒಳಗೊಂಡಿದ್ದು ಆರು ಕ್ಷೇತಗಳಾಗಿವೆ. ನನ್ನ ಒತ್ತಾಯವೇನೆಂದರೆ ಹರಿಹರ ಮತ್ತು ಹೊನ್ನಾಳಿ ಸೇರಿ, ಹರಿಹರದಿಂದ ದಾವಣಗೆರೆಗೆ ಹೋಗಬೇಕಾದರೆ 60 ಕಿ.ಮಿ ಗಳಾಗುತ್ತವೆ.

ಅಧ್ಯಕ್ಷರು : ಅದಕ್ಕೆ ಏನು ಮಾಡಬೇಕೆಂದು ಮೊದಲು ಹೇಳಿ,

ಶ್ರೀ ಎಚ್.ಎಸ್.ಶಿವಶಂಕರ್ : ನೀವು ಕೇಳುವುದಕ್ಕೆ ಅವಕಾಶ ಕೊಟ್ಟರೆ ಹೇಳುತ್ತೇನೆ.

ಆಧ್ಯಕ್ಷರು : ನಿಮಗೆ ಪ್ರಶ್ನೆ ಕೇಳುವುದಕ್ಕೆ ಬರುವುದಿಲ್ಲವೇ? ಮೊದಲು ಪ್ರಶ್ನೆ ಕೇಳಿ.

ಶ್ರೀ ಎಚ್.ಎಸ್.ಶಿವಶಂಕರ್ : ಬೇರೆ ಪ್ರಶ್ನೆಯನ್ನು ಕೇಳುತ್ತಿಲ್ಲ. ಪ್ರಶ್ನೆಗೆ ಸಂಬಂಧಪಟ್ಟಂತೆಯೇ ಕೇಳುತ್ತಿದ್ದೇನೆ, ಹರಿಹರ – ಹೊನ್ನಾಳಿ ಒಳಗೊಂಡಂತೆ ಹರಿಹರವನ್ನು ಕೇಂದ್ರವನ್ನಾಗಿಸಿ ಪೊಲೀಸ್ ಉಪ–ವಿಭಾಗ ಪ್ರಾರಂಭಿಸುವ ಬಗ್ಗೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ಆ ಪ್ರಶ್ನೆಗೆ ಉತ್ತರ ಇಲ್ಲಿಲ್ಲ, ಆ ಪಶ್ನೆ ಇಲ್ಲಿ ಬರುವುದೇ ಇಲ್ಲ.

ಶ್ರೀ ಎಚ್.ಎಸ್.ಶಿವಶಂಕರ್: ಮಾನ್ಯ ಅಧ್ಯಕ್ಷರೆ, ಹರಿಹರ– ಹೊನ್ನಾಳಿ ಒಳಗೊಂಡಂತೆ ಹರಿಹರವನ್ನು ಕೇಂದ್ರವನ್ನಾಗಿಸಿ ಪೊಲೀಸ್ ಉಪವಿಭಾಗ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಉಪ ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಇನ್ನೊಂದು ಉತ್ತರದಲ್ಲಿ ಪುನರ್ ರಚನೆ ಸಂದರ್ಭದಲ್ಲಿ ಮಾಡುವುದಕ್ಕಾಗುವುದಿಲ್ಲವೆಂದು ಗೊಂದಲದ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಸರ್ಕಾರಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ. ದಯಮಾಡಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ಏಕೆಂದರೆ ಎಂ.ಪಿ.ಪ್ರಕಾಶ್ ಅವರು ಇದ್ದಂತಹ ಕಾಲದಲ್ಲಿ ಹರಪನಹಳ್ಳಿ–ಜಗಳೂರು ತಾಲ್ಲೂಕುಗಳ ಮೇಲೆ ಬಹಳ ಪ್ರೀತಿಯಿದ್ದ ಕಾರಣದಿಂದ ಅವೆರಡನ್ನೂ ಸೇರಿ ಮಾಡಿಕೊಂಡರು. ಆದ್ದರಿಂದ ದಯಮಾಡಿ ನಮಗೆ ಹರಿಹರ–ಹೊನ್ನಾಳಿ ಸೇರಿ ಒಂದು ಕೇಂದ್ರ ಮಾಡಿ ಮತ್ತು ಈಗಿರತಕ್ಕಂತಹ ದಾವಣಗೆರೆ–ಚನ್ನಗಿರಿಯನ್ನು ಹಾಗೆಯೇ ಮುಂದು ವರಿಸಿಕೊಂಡು ಹೋಗಬೇಕೆಂದು ಸದನದ ಮುಖಾಂತರ ಮಾನ್ಯ ಸಚಿವರನ್ನು ಕೇಳಿ ಕೊಳ್ಳುತ್ತಿದ್ದೇನೆ.

ಶ್ರೀ ಕೆ.ಜೆ.ಜಾರ್ಜ್ : ಮಾನ್ಯ ಅಧ್ಯಕ್ಷರೆ, ದಾವಣಗೆರೆ ಜಿಲ್ಲೆಯಲ್ಲಿ ಪೊಲೀಸ್ ವಸತಿ ಗೃಹಗಳು ದುಸ್ಥಿತಿಯಲ್ಲಿದೆಯೆಂದು ತಿಳಿದು ಅವುಗಳ ದುರಸ್ತಿಗಾಗಿ 2012–13 ನೇ ಸಾಲಿನ ₹2,63,45,000/–ಗಳ ಅನುದಾನವನ್ನು ಬಿಡುಗಡೆ ಮಾಡಿ, 195 ವಸತಿ ಗೃಹಗಳನ್ನು ದುರಸ್ತಿ ಪಡಿಸಲಾಗಿದೆ.

ಅಧ್ಯಕ್ಷರು : ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಮಾತನ್ನು ಹೇಳುವುದಾದರೆ, ದಾವಣಗೆರೆ ಜಿಲ್ಲೆ ಒಂದೇ ಅಲ್ಲ, ಪೂಲೀಸ್ ವಸತಿ ಗೃಹಗಳನ್ನು ರಿಪೇರಿ ಮಾಡುವ ವಿಚಾರದಲ್ಲಿ ಸರ್ಕಾರ ಆಸಕ್ತಿ ವಹಿಸುತ್ತಿಲ್ಲ ಎನ್ನುವುದು ನನ್ನ ಗಮನಕ್ಕೂ ಬಂದಿದೆ.

ಶ್ರೀ ಕೆ.ಜೆ.ಜಾರ್ಜ್ : ಮಾನ್ಯ ಅಧ್ಯಕ್ಷರೆ, ಪೊಲೀಸ್ ವಸತಿ ಗೃಹಗಳನ್ನು ದುರಸ್ತಿ ಪಡಿಸುವುದನ್ನು ಮೊದಲು ಪೊಲೀಸ್ ಹೌಸಿಂಗ್ ಕಾರ್ಪೊರೇಷನ್‌ನಿಂದ ಮಾಡುತ್ತಿದ್ದರು. ಈಗ ನೇರವಾಗಿ ಎಸ್.ಪಿ.ಯವರಿಗೆ ಹಣವನ್ನು ಕೊಡುತ್ತಿದ್ದೇವೆ. 195 ವಸತಿ ಗೃಹಗಳನ್ನು ರಿಪೇರಿ ಮಾಡುವುದಕ್ಕೆ ₹.2,63,45,000/– ಗಳನ್ನು ಕೊಟ್ಟಿದ್ದೇವೆ. 2013–14ನೇ ಸಾಲಿಗೆ 2,17,33,484/–ರೂ. ಗಳನ್ನು ಕೊಟ್ಟಿದ್ದೇವೆ. ತಮಗೆ ತಿಳಿದಂತೆ ಈ ವರ್ಷ ಸುಮಾರು 11,500 ವಸತಿ ಗೃಹಗಳನ್ನು ಹೊಸದಾಗಿ ಮಾಡುತ್ತಿದ್ದೇವೆ. ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಈಗಾಗಲೇ 2 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು 16 ಪಿ.ಸಿ.ವಸತಿ ಗೃಹಗಳಿಗೆ ಕೆಲಸ ನಡೆಯುತ್ತಿದೆ. ಇದಲ್ಲದೆ ಈ ವರ್ಷ 30 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು 300 ಪೊಲೀಸ್ ಕಾನ್ಸ್‌ಸ್ಟೇಬಲ್ ಮನೆಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಈಗಾಗಲೇ ಈ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೆ ಟೆಂಡರ್ ಪ್ರಕ್ರಿಯೆಯೂ ಪ್ರಾರಂಭಗೊಂಡಿದೆ.

Sub - division ವಿಚಾರವಾಗಿ ಹೇಳುವುದಾದರೆ, ದಾವಣಗೆರೆಯಲ್ಲಿ ಸುಮಾರು 27, ಪೊಲೀಸ್ ಸ್ಟೇಷನ್‌ಗಳಿದ್ದು, ಅದರಲ್ಲಿ ಮೂರು ಸಬ್ ಡಿವಿಷನ್‌ಗಳಿವೆ. ನಮ್ಮ ಪೊಲೀಸ್ ಇಲಾಖೆಯಿಂದ ಹರಿಹರ ಅಥವಾ ಚನ್ನಗಿರಿಯಲ್ಲಿ ಒಂದು ಸಬ್ ಡಿವಿಷನ್ ಮಾಡುವುದಕ್ಕೆ ನಮಗೆ ಈಗಾಗಲೇ ಪ್ರಸ್ತಾವನೆ ಬಂದಿದ್ದು, ಅದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಎರಡರಲ್ಲಿ ಒಂದು ಕಡೆ ನಾವು ಸಬ್–ಡಿವಿಷನ್ ಪ್ರಾರಂಭ ಮಾಡುತ್ತೇವೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 44(666)

ಅಧ್ಯಕ್ಷರು : ಬೋಪಯ್ಯನವರೆ, ಈ ಪ್ರಶ್ನೆ ಬೇರೆ ಕಡೆಗೆ ವರ್ಗಾವಣೆ ಆಗಿದೆ.